**ಮಾನ್ಯ 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಮಂಡ್ಯ**

**ಎಸ್.ಸಿ. ನಂ.120/2025**

**ದೂರುದಾರರು:** **ಕರ್ನಾಟಕ ರಾಜ್ಯ ಮಂಡ್ಯ ಪಶ್ಚಿಮ ಪೊಲೀಸ್ ಠಾಣೆ ಮೂಲಕ**

**ವಿರುದ್ಧ**

**ಆರೋಪಿಗಳು:** **ಜವಾದ್ ಪಾಷ ಮತ್ತು ಇಬ್ಬರು ಇತರರು**

**ದೋಷಾರೋಪಣೆ**

**ಯಾದವ.ಕೆ. ಬಿಎ.ಎಲ್., ಎಲ್ ಎಲ್ ಬಿ., 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮಂಡ್ಯ** ಆದ ನಾನು ಈ ಪ್ರಕರಣದ ಆರೋಪಿಗಳಾದ

1. ಜವಾದ್ ಪಾಷ,
ಬಿನ್ ಮುನೀರ್,
ವಯಸ್ಸು 34 ವರ್ಷ,
ವಾಸ: ಮಾರ್ಕೇಟ್ ಮಸೀದಿ ರಸ್ತೆ,
3 ನೇ ಕ್ರಾಸ್, ಕಮಲನಗರ,
ಬೆಂಗಳೂರು.

2. ಇಮ್ರಾನ್ ಅಲಿಯಾಸ್ ಪಾಷ,
ಬಿನ್ ಲೇಟ್ ಬಶಾಜಾನ್,
ವಯಸ್ಸು 38 ವರ್ಷ,
ವಾಸ: ಕೇರಾಫ್ ಭೈರೇಶ್,
4 ನೇ ಕ್ರಾಸ್, ಗಾಂಧಿನಗರ,
ಮಂಡ್ಯ ಪಟ್ಟಣ, ಮಂಡ್ಯ.

3. ಅಜರ್ ಪಾಷ,
ಬಿನ್ ಅಕ್ಬರ್ ಪಾಷ,
ವಯಸ್ಸು 38 ವರ್ಷ,
ವಾಸ: 5 ನೇ ಕ್ರಾಸ್, ಗಾಂಧಿನಗರ,
ಮಂಡ್ಯ ಪಟ್ಟಣ, ಮಂಡ್ಯ.

ತಮ್ಮ ಮೇಲೆ ಹೊರಿಸುತ್ತಿರುವ ದೋಷಾರೋಪಣೆಗಳೇನೆಂದರೆ:

ಮೊದಲನೇಯದಾಗಿ, ದಿನಾಂಕ 03.08.2025 ರಂದು ರಾತ್ರಿ 12.00 ಗಂಟೆ ಸಮಯದಲ್ಲಿ 1 ರಿಂದ 3 ನೇ ಆರೋಪಿಗಳಾದ ನೀವು ಮಂಡ್ಯ ಪಶ್ಚಿಮ ಪೊಲೀಸ್ ಠಾಣಾ ವ್ಯಾಪ್ತಿಯ ಮಂಡ್ಯ ಪಟ್ಟಣದ ಗಾಂಧಿನಗರ ಬಡಾವಣೆಯ 4 ನೇ ಕ್ರಾಸ್‌ನ ಭೈರೇಶ್ವರ ರವರ ಮನೆಯ

ಮುಂಭಾಗದಲ್ಲಿರುವ 2 ನೇ ಆರೋಪಿಯ ಮನೆಯ ಬಳಿಗೆ ಮೃತ ಸಲ್ಲಾಉದ್ದೀನ್ ಅಲಿಯಾಸ್ ಸಲ್ಲೂ ಜೊತೆ ಬಂದಾಗ ಚಾಸಾ.15 ರವರು ಮೃತ ಮತ್ತು ಆರೋಪಿಗಳು ಮದ್ಯಪಾನ ಮಾಡಿದ್ದಾರೆಂದು ಗಲಾಟೆ ಮಾಡಿ ಆರೋಪಿ 3 ರವರ ಮೇಲೆ ನೀರು ಎರಚಿದಾಗ ಆರೋಪಿಗಳು ಮತ್ತು ಮೃತ ಸಲ್ಲಾಉದ್ದೀನ್ ಪರಸ್ಪರ ಗಲಾಟೆ ಮಾಡಿಕೊಂಡು ಪರಸ್ಪರ ತಳ್ಳಾಡಿದಾಗ 1 ರಿಂದ 3 ನೇ ಆರೋಪಿಗಳಾದ ನೀವು ಮೃತ ಸಲ್ಲಾಉದ್ದೀನ್‌ನನ್ನು ಕೊಲೆ ಮಾಡುವ ಉದ್ದೇಶದಿಂದ, ಆತನ ಜೊತೆ ಜಗಳವಾಡಿ 1 ನೇ ಆರೋಪಿ ಮೃತ ಸಲ್ಲಾಉದ್ದೀನ್‌ನನ್ನು ಓಡಿಸಿಕೊಂಡು ಹೋಗಿ ಮಂಡ್ಯ ಪಟ್ಟಣ ಗಾಂಧಿನಗರದ 3 ನೇ ಕ್ರಾಸ್ ಬಳಿ ಸಲ್ಲಾಉದ್ದೀನನ ಬಲಭಾಗದ ಕಾಲಿಗೆ ಚಾಕುವಿನಿಂದ ಚುಚ್ಚಿ, ತೀವ್ರಸ್ವರೂಪದ ಗಾಯವುಂಟು ಮಾಡಿ ಬಳಿಕ ಅದೇ ಗಾಯದಿಂದ ಮೃತ ಸಲ್ಲಾಉದ್ದೀನ್ ಮೃತಪಟ್ಟಿದ್ದು,  ಮೂಲಕ ನೀವೆಲ್ಲರೂ ಭಾರತೀಯ ನ್ಯಾಯ ಸಂಹಿತೆಯ ಕಲಂ 103(1) ಸಹವಾಚಕ ಕಲಂ 3(5) ರಡಿಯಲ್ಲಿ ದಂಡನೀಯ ಅಪರಾಧ ಎಸಗಿದ್ದೀರಿ ಮತ್ತು ಆ ಮೂಲಕ ನೀವು ನ್ಯಾಯಾಲಯದ ಸಂಜ್ಞೆಗೆ ಒಳಪಡುತ್ತೀರಿ.

ಎರಡನೇಯದಾಗಿ,  1 ನೇ ಆರೋಪಿ ಜವಾದ್ ಪಾಷ ಮೃತನಿಗೆ ಹಲ್ಲೆ ವಾಡಿದ ಬಳಿಕ ಸಾಕ್ಷ್ಯವನ್ನು ನಾಶಪಡಿಸುವ ಉದ್ದೇಶದಿಂದ ಕೃತ್ಯಕ್ಕೆ ಬಳಸಿದ ಚಾಕುವನ್ನು ನಾಶ ಮಾಡಿ ಸಾಕ್ಷ್ಯವನ್ನು ಮರೆಮಾಚಿ ಆ ಮೂಲಕ ನೀವು ಭಾರತೀಯ ನ್ಯಾಯ ಸಂಹಿತೆಯ ಕಲಂ 238 ರಡಿಯಲ್ಲಿ ದಂಡನೀಯ ಅಪರಾಧ ಎಸಗಿದ್ದೀರಿ ಮತ್ತು ಆ ಮೂಲಕ ನೀವು ನ್ಯಾಯಾಲಯದ ಸಂಜ್ಞೆಗೆ ಒಳಪಡುತ್ತೀರಿ.

ಮೇಲಿನ ಆರೋಪಕ್ಕೆ ಸಂಬಂಧಪಟ್ಟಂತೆ 1 ರಿಂದ 3 ನೇ ಆರೋಪಿಗಳಾದ ನಿಮ್ಮನ್ನು ವಿಚಾರಣೆ ಎದುರಿಸಲು ನಿರ್ದೇಶಿಸುತ್ತಿದ್ದೇನೆ.

ದಿನಾಂಕ 09 ನೇ ಫೆಬ್ರುವರಿ 2026.

**(ಯಾದವ.ಕೆ.)**
**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಮಂಡ್ಯ**

**ಮಾನ್ಯ 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಮಂಡ್ಯ**

**ಎಸ್.ಸಿ. ನಂ.120/2025**

ದೂರುದಾರರು: ಕರ್ನಾಟಕ ರಾಜ್ಯ ಮಂಡ್ಯ ಪಶ್ಚಿಮ ಪೊಲೀಸ್ ಠಾಣೆ ಮೂಲಕ

**ವಿರುದ್ಧ**

1. ಜವಾದ್ ಪಾಷ,
ಬಿನ್ ಮುನೀರ್,
ವಯಸ್ಸು 34 ವರ್ಷ,
ವಾಸ: ಮಾರ್ಕೆಟ್ ಮಸೀದಿ ರಸ್ತೆ,
3 ನೇ ಕ್ರಾಸ್, ಕಮಲನಗರ,
ಬೆಂಗಳೂರು.

**ಆರೋಪಣೆ**

ಪ್ರಶ್ನೆ1: ಕನ್ನಡ ಭಾಷೆಯಲ್ಲಿ ಓದಿ ಹೇಳಿದ್ದನ್ನು ತಿಳಿದುಕೊಂಡಿದ್ದೀರಾ?

ಉತ್ತರ:

ಪ್ರಶ್ನೆ2: ತಪ್ಪನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ವಿಚಾರಣೆ ಎದುರಿಸುತ್ತೀರಾ?

ಉತ್ತರ:

**(ಯಾದವ.ಕೆ.)**
4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ

ಸ್ಥಳ: ಮಂಡ್ಯ
ದಿನಾಂಕ: 09.02.2026

**ಮಾನ್ಯ 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಮಂಡ್ಯ**

**ಎಸ್.ಸಿ. ನಂ.120/2025**

ದೂರುದಾರರುಃ ಕರ್ನಾಟಕ ರಾಜ್ಯ ಮಂಡ್ಯ ಪಶ್ಚಿಮ ಪೊಲೀಸ್ ಠಾಣೆ ಮೂಲಕ

**ವಿರುದ್ಧ**

2. ಇಮ್ರಾನ್ ಅಲಿಯಾಸ್ ಪಾಷ,
ಬಿನ್ ಲೇಟ್ ಬಶಾಜಾನ್,
ವಯಸ್ಸು 38 ವರ್ಷ,
ವಾಸಃ ಕೇರಾಫ್ ಭೈರೇಶ್,
4 ನೇ ಕ್ರಾಸ್, ಗಾಂಧಿನಗರ,
ಮಂಡ್ಯ ಪಟ್ಟಣ, ಮಂಡ್ಯ.

**ಆರೋಪಣೆ**

ಪ್ರಶ್ನೆ1: ಕನ್ನಡ ಭಾಷೆಯಲ್ಲಿ ಓದಿ ಹೇಳಿದ್ದನ್ನು ತಿಳಿದುಕೊಂಡಿದ್ದೀರಾ?

ಉತ್ತರ:

ಪ್ರಶ್ನೆ2: ತಪ್ಪನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ವಿಚಾರಣೆ ಎದುರಿಸುತ್ತೀರಾ?

ಉತ್ತರ:

**(ಯಾದವ.ಕೆ.)**
4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ

ಸ್ಥಳಃ ಮಂಡ್ಯ
ದಿನಾಂಕಃ 09.02.2026

**ಮಾನ್ಯ 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಮಂಡ್ಯ**

**<u>ಎಸ್.ಸಿ. ನಂ.120/2025</u>**

ದೂರುದಾರರುಃ ಕರ್ನಾಟಕ ರಾಜ್ಯ ಮಂಡ್ಯ ಪಶ್ಚಿಮ ಪೊಲೀಸ್ ಠಾಣೆ ಮೂಲಕ

**ವಿರುದ್ಧ**

3. ಅಜರ್ ಪಾಷ,
ಬಿನ್ ಅಕ್ಬರ್ ಪಾಷ,
ವಯಸ್ಸು 38 ವರ್ಷ,
ವಾಸಃ 5 ನೇ ಕ್ರಾಸ್, ಗಾಂಧಿನಗರ,
ಮಂಡ್ಯ ಪಟ್ಟಣ, ಮಂಡ್ಯ.

**<u>ಆರೋಪಣೆ</u>**

ಪ್ರಶ್ನೆ1: ಕನ್ನಡ ಭಾಷೆಯಲ್ಲಿ ಓದಿ ಹೇಳಿದ್ದನ್ನು ತಿಳಿದುಕೊಂಡಿದ್ದೀರಾ?

ಉತ್ತರ:

ಪ್ರಶ್ನೆ2: ತಪ್ಪನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ವಿಚಾರಣೆ ಎದುರಿಸುತ್ತೀರಾ?

ಉತ್ತರ:

**(ಯಾದವ.ಕೆ.)**
4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ

ಸ್ಥಳಃ ಮಂಡ್ಯ
ದಿನಾಂಕಃ 09.02.2026